ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 335
ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
ಉತ್ತರಿಸುವ ದಿನಾಂಕ : 06.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ವೃದ್ಧ ಪಾಲಕರನ್ನು ಇಂದಿನ ಯುವ ಜನಾಂಗ ಕಡೆಗಣಿಸುತ್ತಿದ್ದು ಅಸಹಾಯಕ ವೃದ್ಧರ ರಕ್ಷಣೆ ಮತ್ತು ಸುರಕ್ಷತೆಯ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	• ಕೇಂದ್ರ ಸರ್ಕಾರವು ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007ನ್ನು ಜಾರಿಗೊಳಿಸಿದ್ದು, ಇದನ್ನು ದಿನಾಂಕ:19.02.2009 ರಿಂದ ರಾಜ್ಯಸರ್ಕಾರದಲ್ಲಿ ಜಾರಿಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಕಾಯ್ದೆಯ ಪರಿಚ್ಛೇದ 7ರ ಉಪನಿಯಮ (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರತಿ ಕಂದಾಯ ಉಪವಿಭಾಗದಲ್ಲಿ ಒಂದು ನ್ಯಾಯಮಂಡಳಿಯನ್ನು ಸ್ಥಾಪಿಸಲಾಗಿದೆ ಹಾಗೂ ಸದರಿ ಕಾಯ್ದೆಯ ಪರಿಚ್ಛೇದ 7ರ ಉಪನಿಯಮ (2) ರನ್ವಯ ನಿರ್ವಹಣಾ ಮಂಡಳಿಯ ಅಧ್ಯಕ್ಷರನ್ನಾಗಿ ಆಯಾ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರನ್ನು (ಉಪ ವಿಭಾಗಾಧಿಕಾರಿರವರನ್ನು) ನೇಮಕ ಮಾಡಲಾಗಿದೆ. • ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ–2007 (ಕೇಂದ್ರ ಶಾಸನ 2007ರ ನಿಯಮ–56) ಪರಿಚ್ಛೇದ 7ರನ್ವಯ ಸ್ಥಾಪಿಸಿರುವ ನಿರ್ವಹಣಾ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಅಂಗೀಕರಿಸಲು ನಿಯಮ 15 ರ ಉಪನಿಯಮ (1)ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಪ್ರತಿ ಜಿಲ್ಲೆಗೆ ಒಂದರಂತೆ "ಮೇಲ್ಮನವಿ ನ್ಯಾಯಮಂಡಳಿ"ಯನ್ನು ರಚಿಸಿದೆ. ಸದರಿ ಕಾಯ್ದೆಯ ಸೆಕ್ಷನ್ 15 ಉಪನಿಯಮ 2ರನ್ವಯ "ಮೇಲ್ಮನವಿ ನ್ಯಾಯಮಂಡಳಿಯ" ಅಧ್ಯಕ್ಷರನ್ನಾಗಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. • ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007 (ಕೇಂದ್ರ ಶಾಸನ 2007ರ ನಿಯಮ–56)ರ ಕಾಯ್ದೆಯ ಪರಿಚ್ಛೇದ 18 (1)ರನ್ವಯ ಆಯಾ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ನಿರ್ವಹಣಾಧಿಕಾರಿಗಳೆಂದು ಪದನಾಮಗೊಳಿಸಿ ಸರ್ಕಾರವು ದಿನಾಂಕ:13.09.2010ರಂದು ಆದೇಶಿಸಿದೆ.

..2

		• ಸದರಿ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಾಜ್ಯ ಪರಿಷತ್ ಹಾಗೂ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ದಿ:22.08.2011ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಹಿರಿಯ ನಾಗರಿಕರಿಗೆ ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲ ಇಂತಹ ಅನೇಕ ಸಮಸ್ಯೆಗಳ ನಿವಾರಣೆಗಾಗಿ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿರುತ್ತದೆ. ಆದರೆ ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ. (ಸಂಸ್ಥೆಗಳ ವಿವರ ಅನುಬಂಧ–1ರಲ್ಲಿ ನೀಡಲಾಗಿದೆ.)
ಆ	ವೃದ್ಧಾಶ್ರಮ ಮತ್ತು ಅನಾಥಾಶ್ರಮಗಳನ್ನು ಸಂಯೋಜಿಸಿ ಮನೆ ವಾತಾವರಣ ಇರುವಂತಹ ಹೊಸ ತರಹದ ಪಾಲನಾ ಗೃಹಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ನಿಲುವೇನು:	• ರಾಜ್ಯದಲ್ಲಿ 30 ಜಿಲ್ಲೆಗಳಲ್ಲಿ ಒಟ್ಟು 29 ವೃದ್ಧಾಶ್ರಮಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನವನ್ನು ನೀಡಲು ಅವಕಾಶವನ್ನು ಕಲ್ಪಿಸಿಕೊಳ್ಳಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ 25 ವೃದ್ಧರು ಇರುವ ಒಂದು ಘಟಕಕ್ಕೆ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ನೀಡಲಾಗುತ್ತದೆ. • ಪ್ರತಿ ಜಿಲ್ಲೆಯ ಕಂದಾಯ ಉಪ ವಿಭಾಗದಲ್ಲಿ ತಲಾ ಒಂದರಂತೆ ಹೊಸದಾಗಿ 52 ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ತೆರೆಯಲು 2018–19ರಲ್ಲಿ ಆದೇಶವಾಗಿದ್ದು, ಅನುಷ್ಠಾನಗೊಳಿಸುವ ಕ್ರಮ ಜಾರಿಯಲ್ಲಿರುತ್ತದೆ. • ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, 24 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50–150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. (ವಿವರ ಅನುಬಂಧ–2ರಲ್ಲಿ ನೀಡಲಾಗಿದೆ.) • ವೃದ್ಧಾಶ್ರಮ ಮತ್ತು ಅನಾಥಾಶ್ರಮಗಳನ್ನು ಸಂಯೋಜಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಸದ್ಯ ಯಾವುದೇ ನಿಲುವು ತಳೆದಿರುವುದಿಲ್ಲ.

..3

ಇ	ವೃದ್ಧರನ್ನು ಕಡೆಗಣಿಸಿ ಅವರ ಅಂತಿಮ ದಿನಗಳಲ್ಲಿ ಬೀದಿಗೆ ದೂಡುವ ಕುಟುಂಬಸ್ಥರ ಮೇಲೆ ಕ್ರಮ ಕೈಗೊಳ್ಳುವ ಕಾನೂನು ರೂಪಿಸುವ ಬಗ್ಗೆ ಸರ್ಕಾರ ಚಿಂತಿಸುವುದೇ?	• ಪೋಷಕರನ್ನು ನಿರ್ಲಕ್ಷಿಸುವ ಮಕ್ಕಳಿಗೆ ಅಥವಾ ಪೋಷಕರಿಗೆ ವಿಧಿಸುವ ದಂಡ/ಶಿಕ್ಷೆಯು ಹಿರಿಯ ನಾಗರಿಕರ ನಿರ್ವಹಣೆ ಮತ್ತು ರಕ್ಷಣಾ ಕಾಯ್ದೆ2007ರಲ್ಲಿ, ಮಕ್ಕಳು ಪೋಷಕರನ್ನು ತ್ಯಜಿಸುವ ಪ್ರವೃತ್ತಿಯನ್ನು ತಡೆಗಟ್ಟಲು, ಇಂತಹ ಮಕ್ಕಳಿಗೆ/ಪೋಷಕರಿಗೆ ವಿಚಾರಣೆ ನಂತರ 3 ತಿಂಗಳ ಜೈಲು ವಾಸ, ಮತ್ತು ರೂ.5000/- ದಂಡ ಅಥವಾ ಎರಡೂ ವಿಧಿಸಲು ಅವಕಾಶವಿದೆ.

ಸಂಖ್ಯೆ: ಮಮಇ 40 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಮಾನ್ಯ ವಿಧಾನ ಪರಿಷತಿನ್ತ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 335ಕ್ಕೆ

ಅನುಬಂಧ-1

ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು

ಕ್ರ ಸಂ.	ಜಿಲ್ಲೆಯ ಹೆಸರು	ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸುತ್ತಿರುವ ಸಂಸ್ಥೆಗಳ ಹೆಸರು ಮತ್ತು ವಿಳಾಸ
1	ಬೆಂಗಳೂರು ನಗರ	ನೈಟಿಂಗೇಲ್ ಮೆಡಿಕಲ್ ಟ್ರಸ್ಟ್, ನಂ.337, 2ನೇ ಕ್ರಾಸ್, 1ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು 560 032
2	ಬೆಂಗಳೂರು ಗ್ರಾಮಾಂತರ	ಸರ್ವೋದಯ ಸರ್ವಿಸ್ ಸೊಸೈಟಿ, ಎವರ್ ಗ್ರೀನ್ ಸ್ಕೂಲ್ ಹತ್ತಿರ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ
3	ಬಳ್ಳಾರಿ	ಸಮಗ್ರ ಸಾಮಾಜಿಕ ಹಾಗೂ ನೈತಿಕ ಅಭಿವೃದ್ಧಿ (ಸ್ಟೈಲ್) ಸಂಸ್ಥೆ, ಎ.ಪಿ.ಎಂ.ಸಿ ಹತ್ತಿರ, ಕುರುಗೋಡು 583116, ಬಳ್ಳಾರಿ
4	ಬೆಳಗಾವಿ	–
5	ಬೀದರ್	ಡಾ:ಬಿ.ಆರ್.ಅಂಬೇಡ್ಕರ್ ಕಲ್ಚರಲ್ ಸೊಸೈಟಿ, ಹೆಚ್.ನಂ. 8.11.228, ಹೌಸ್ ಆಫ್ ಡಾನ್, ಕೆ.ಇ.ಬಿ ರಸ್ತೆ, ಬೀದರ್
6	ಬಾಗಲಕೋಟೆ	ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ
7	ವಿಜಯಪುರ	ಮುಧೋಳ ಶಿವಯೋಗಿ ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ, ಜೋಳದಪಕಾ, ಬಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ
8	ಚಿಕ್ಕಬಳ್ಳಾಪುರ	ಶ್ರೀ ವಿಷ್ಣು ವಿದ್ಯಾ ಸಂಸ್ಥೆ, ಚೊಕ್ಕನಹಳ್ಳಿ, ಏನಿಗದಲೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
9	ಚಿಕ್ಕಮಗಳೂರು	ಸೊಸೈಟಿ ಫಾರ್ ಪೀಪಲ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್, (ರಿ), ಚಿಕ್ಕಮಗಳೂರು
10	ಚಿತ್ರದುರ್ಗ	ಶ್ರೀ ಬಸವೇಶ್ವರ ವಿದ್ಯಾಸಂಸ್ಥೆ (ರಿ), ಗಾರೆಹಟ್ಟಿ, ಲೋಕಾಯುಕ್ತ ಕಛೇರಿ, ಬಿ.ಡಿ.ರಸ್ತೆ, ಚಿತ್ರದುರ್ಗ ಜಿಲ್ಲೆ
11	ಧಾರವಾಡ	ವಿಶ್ವಧರ್ಮ ಮಹಿಳಾ ಮತ್ತು ಮಕ್ಕಳ ಶಿಕ್ಷಣ ಸೇವಾಶ್ರಮ ಸಮಿತಿ, ವೀರಾಪುರ ಓಣಿ, ಹಕ್ಕಲ ಹುಬ್ಬಳ್ಳಿ, ಧಾರವಾಡ
12	ಗದಗ	ಶ್ರೀ ಸಿದ್ದೇಶ್ವರ ವಿದ್ಯಾಪೀಠ (ರಿ) ತಾಳಿಕೋಟೆ, ಪೋಲೀಸ್ ಸ್ಟೇಷನ್ ರಸ್ತೆ, ಹತ್ತಿರ, ವಿಲ್ಲಟ ನಗರ, ತಾಳಿಕೋಟೆ, ವಿಜಯಪುರ ಜಿಲ್ಲೆ.
13	ಗುಲ್ಬರ್ಗಾ	–
14	ಹಾಸನ	ಶರಾವತಿ ಎಜುಕೇಷನ್ ಸೊಸೈಟಿ, (ರಿ), ದಂಡಿಗನಹಳ್ಳಿ, ಚನ್ನರಾಯ'1ಪಟ್ಟಣ ತಾ: ಹಾಸನ ಜಿಲ್ಲೆ.

15	ಹಾವೇರಿ	ಜೋಶಿ ಚಾರಿಟೇಬಲ್ ಟ್ರಸ್ಟ್ (ರಿ), ಜೋಶಿ ಮನೆ, ರಾಘವೇಂದ್ರ ಮಠದ ಹತ್ತಿರ, ಹಾನಗಲ್, ಹಾವೇರಿ ಜಿಲ್ಲೆ
16	ಕೋಲಾರ	ದಿವ್ಯಜ್ಯೋತಿ ಎಜುಕೇಷನ್ & ಕಲ್ಚರಲ್ ಸೊಸೈಟಿ, ಅರಿಕುಂಟೆ ಗ್ರಾಮ, ಮಣಿಗಾನಹಳ್ಳಿ ಅಂಚೆ, ಶ್ರೀನಿವಾಸಪುರ ತಾ: ಕೋಲಾರ
17	ಕೊಪ್ಪಳ	ಶ್ರೀ ಸಿದ್ದೇಶ್ವರ ವಿದ್ಯಾಪೀಠ (ರಿ) ತಾಳಿಕೋಟೆ, ಪೋಲೀಸ್ ಸ್ಟೇಷನ್ ರಸ್ತೆ, ಹತ್ತಿರ, ವಿಲ್ಲಟ ನಗರ, ತಾಳಿಕೋಟೆ, ವಿಜಯಪುರ ಜಿಲ್ಲೆ.
18	ಮಂಡ್ಯ	ಅಕ್ಷಯ ನಿಕೇತನ ಟ್ರಸ್ಟ್ (ರಿ), ಸೊನಗಹಳ್ಳಿ, ಮಂಡ್ಯ ಜಿಲ್ಲೆ
19	ರಾಮನಗರ	ಅಕ್ರೆಸೆಟ್ (ರಿ), ಗ್ರಾಮೀಣ ಶಿಕ್ಷಣ ಮತ್ತು ಸಮಾಜ ಪರಿವರ್ತನ ಸಂಸ್ಥೆ, ತಿಟ್ಟಮಾರನಹಳ್ಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ
20	ಶಿವಮೊಗ್ಗ	ಲಲಿತಾ ಅಕಾಡೆಮಿ, ಪಾಪ್ಯುಲರ್ ರೈಸ್ ಮಿಲ್ ಹತ್ತಿರ, ಹೊನ್ನಾಳಿ ರಸ್ತೆ, ಶಿವಮೊಗ್ಗ
21	ತುಮಕೂರು	ಶ್ರೀ ರಾಮು ಫೌಂಡೇಷನ್ ಫಾರ್ ರೂರಲ್ ಆರ್ಗನೈಸೇಷನ್ (ರಿ), ನಂ.1616, 3ನೇ ಕ್ರಾಸ್, ಎಂ.ಜಿ.ರಸ್ತೆ, ತುಮಕೂರು
22	ಮಡಿಕೇರಿ	ಗ್ರೀನ್ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ (ರಿ), ನಂ.238, ಪ್ರಜ್ಯೋನಿಜ ನಿಲಯ, ಜ್ಯೋತಿ ಸ್ಕೂಲ್ ಹತ್ತಿರ ನಿಮಿಷಾಂಬ ನಗರ, ಮೈಸೂರು.
23	ಯಾದಗಿರಿ	ಶ್ರೀ ಬಾಲಾಜಿ ಗ್ರಾಮೀಣಾಭಿವೃದ್ಧಿ ಮತ್ತು ಶಿಕ್ಷಣ ಸಂಸ್ಥೆ, ಅಂಬೇಡ್ಕರ್ ನಗರ, ಯಾದಗಿರಿ
24	ಉತ್ತರ ಕನ್ನಡ	ಶ್ರೀ ಮಲ್ಲಿಕಾರ್ಜುನ ಜನಸೇವಾ ಸೊಸೈಟಿ, ಬೆಳಗಾವಿ ಶಾಖೆ, ಕಾರವಾರ
25	ಚಾಮರಾಜನಗರ	ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ (ರಿ), ನಂ.22/62, 2ನೇ ತಿರುವು, ಭ್ರಮರಂಭ ಬಡಾವಣೆ, ಚಾಮರಾಜನಗರ ಜಿಲ್ಲೆ.
26	ದಕ್ಷಿಣ ಕನ್ನಡ	ವಿಶ್ವಾಸ್ ಟ್ರಸ್ಟ್, ವೆಲೆನ್ಸಿಯಾ ಹಾಲ್ ರಸ್ತೆ, 4ನೇ ಅಡ್ಡರಸ್ತೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ
27	ಮೈಸೂರು	ಜೆ.ಎಸ್.ಎಸ್ ಮೆಡಿಕಲ್ ಸರ್ವಿಸ್ ಟ್ರಸ್ಟ್, ಜಗದ್ಗುರು ಡಾ: ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು
28	ಉಡುಪಿ	ಉಡುಪಿ ಮಹಿಳಾ ಮಂಡಳಿಗಳ ಒಕ್ಕೂಟ (ರಿ), ಉಡುಪಿ ಕೃಷ್ಣಕೃಪ ಕಾಂಪೌಂಡ್, ವಿಶ್ವಾಸ್ ಟವರ್ ಹತ್ತಿರ, ಕೋರ್ಟ್ ಹಿಂಬದಿ ರಸ್ತೆ, ಉಡುಪಿ
29	ದಾವಣಗೆರೆ	ಗಾಯಿತ್ರಿ ಗ್ರಾಮೀಣ ವಿದ್ಯಾಸಂಸ್ಥೆ (ರಿ), ಮಾಯಕೊಂಡ ದಾವಣಗೆರೆ
30	ರಾಯಚೂರು	ಸುರಕ್ಷಾ ಸಂಸ್ಥೆ, ಸ್ಟೇಷನ್ ಏರಿಯಾ, ಗುಡ್‌ಷಡ್ ರಸ್ತೆ, ರಾಯಚೂರು

ಮಾನ್ಯ ವಿಧಾನ ಪರಿಷತಿನ್ತ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 335ಕ್ಕೆ

ಅನುಬಂಧ-2

ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರವನ್ನು ನಡೆಸುತ್ತಿರುವ ಸಂಸ್ಥೆಯ ವಿವರ

ಕ್ರಸಂ.	ಜಿಲ್ಲೆಯ ಹೆಸರು	ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ ನಡೆಸುತ್ತಿರುವ ಸಂಸ್ಥೆಗಳ ವಿವರ
1	ಬಳ್ಳಾರಿ	ಸಮಗ್ರ ಸಾಮಾಜಿಕ ಹಾಗೂ ನೈತಿಕ ಅಭಿವೃದ್ಧಿ (ಸ್ಮೈಲ್) ಸಂಸ್ಥೆ, ಎ.ಪಿ.ಎಂ.ಸಿ ಹತ್ತಿರ, ಕುರುಗೋಡು 583116, ಬಳ್ಳಾರಿ ಜಿಲ್ಲೆ, ದೂರವಾಣಿ ಸಂಖ್ಯೆ: 9964342805 ಇ-ಮೇಲ್ ವಿಳಾಸ: smileorg@rediffmail.com
2	ಬೆಳಗಾವಿ	ಶ್ರೀ ಶಿವಲಿಂಗೇಶ್ವರ ವಿದ್ಯಾಸಂಸ್ಥೆ, ಶಿವಬಸವ ನಿಲಯ, ಪ್ಲಾಟ್ ನಂ. 636, ಸೆಕ್ಟರ್ 05, ದೂಬಾಲ್ ರಸ್ತೆ, ಶ್ರೀನಗರ, ಬೆಳಗಾವಿ ಜಿಲ್ಲೆ. ದೂರವಾಣಿ ಸಂಖ್ಯೆ: 9739761581, ಇ-ಮೇಲ್ ವಿಳಾಸ: sghiremath70@gmail.com
3	ಮೈಸೂರು	ಗ್ರೀನ್ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ (ರಿ), ನಂ.238, ಪ್ರಜ್ಯೋನಿಜ ನಿಲಯ, ಜ್ಯೋತಿ ಸ್ಕೂಲ್ ಹತ್ತಿರ, ನಿಮಿಷಾಂಬನಗರ, ಮೈಸೂರು 570 023 ದೂರವಾಣಿ ಸಂಖ್ಯೆ:0821 2566408, ಮೊಬೈಲ್ ಸಂಖ್ಯೆ: 9448425402, 99006657482 ಇ-ಮೇಲ್ ವಿಳಾಸ: green_2003@gmail.com
4	ಚಿಕ್ಕಬಳ್ಳಾಪುರ	ಮಾನಸ ಮೆಡಿಕಲ್ ಟ್ರಸ್ಟ್ (ರಿ), ರತ್ನಮ್ಮ ಕಾಂಪ್ಲೆಕ್ಸ್, ಟೋಬಾಕೊ ಕಾಲೋನಿ, ಬಿ.ಹೆಚ್. ರಸ್ತೆ, ಗೌರಿಬಿದನೂರು ಟೌನ್, ಚಿಕ್ಕಬಳ್ಳಾಪುರ ಜಿಲ್ಲೆ 561 208, ದೂರವಾಣಿ ಸಂಖ್ಯೆ: 9945166778 ಇ-ಮೇಲ್ ವಿಳಾಸ : manasamedicaltrust@gmail.com
5	ಚಿಕ್ಕಮಗಳೂರು	ಸೊಸೈಟಿ ಫಾರ್ ಪೀಪಲ್ಸ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ (ರಿ), 4ನೇ ಕ್ರಾಸ್, ವರ್ತಕರ ಭವನ ಎದುರು, ಗಾಂಧಿನಗರ (ದೋಣಿಕನ), ಚಿಕ್ಕಮಗಳೂರು 577101, ದೂರವಾಣಿ ಸಂಖ್ಯೆ: 08262-238417, ಮೊಬೈಲ್ ಸಂಖ್ಯೆ: 9448008417, ಇ-ಮೇಲ್ ವಿಳಾಸ:kadurprakasha@yahoo.com
6	ದಾವಣಗೆರೆ	ಆದರ್ಶ ಸಮಾಜ ಕಾರ್ಯಸಂಸ್ಥೆ (ರಿ), ನಂ.1959/30, 5ನೇ ಮೈನ್, 15ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ ಜಿಲ್ಲೆ, ದೂರವಾಣಿ ಸಂಖ್ಯೆ: 9845132783 ಇ-ಮೇಲ್ ವಿಳಾಸ: manjappa_adarsha@yahoo.com
7	ಧಾರವಾಡ	ಶ್ರೀ ವೀರಭದ್ರ ಚಾರಿಟೇಬಲ್ ಟ್ರಸ್ಟ್ (ರಿ), ಕರ್ನಾಟಕ ಸರ್ಕಲ್ ಹತ್ತಿರ, ಕೆ.ಹೆಚ್.ಬಿ ಕಾಲೋನಿ, ನವನಗರ, ಹುಬ್ಬಳ್ಳಿ, ಧಾರವಾಡ ಜಿಲ್ಲೆ, ದೂರವಾಣಿ ಸಂಖ್ಯೆ: 9483702626, ಇ-ಮೇಲ್ ವಿಳಾಸ: sriveerabhadracharitabletrust@yahoo.in
8	ಹಾಸನ	ಶರಾವತಿ ಎಜುಕೇಷನ್ ಸೊಸೈಟಿ (ರಿ), ಅಗ್ರಹಾರ, ದಂಡಿಗಾನಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, ದೂರವಾಣಿ ಸಂಖ್ಯೆ: 9008628260, 9731252615 ಇ-ಮೇಲ್ ವಿಳಾಸ: sesngocrp@gmail.com
9	ವಿಜಯಪುರ	ಶ್ರೀ ಸಿದ್ದೇಶ್ವರ ವಿದ್ಯಾಪೀಠ (ರಿ), ಕನ್ಸೂಮರ್ ಕೋರ್ಟ್ ಹತ್ತಿರ, ಗಣೇಶ್ ನಗರ, ಬಿ.ಬಿ.ರಸ್ತೆ, ವಿಜಯಪುರ 586109 ದೂರವಾಣಿ ಸಂಖ್ಯೆ: 08352-276668, ಮೊಬೈಲ್ ಸಂಖ್ಯೆ: 9741093523, ಇ-ಮೇಲ್ ಸಂಖ್ಯೆ: assvp6453@gmail.com
10	ಹಾವೇರಿ	ನವಜ್ಯೋತಿ ಸ್ವಯಂ ಸೇವಾ ಮತ್ತು ಗ್ರಾಮೀಣ ಅಭಿವೃದ್ಧಿ (ನಿಶಾರ್ಡ) ಹಿರೇಗೌಡ್ರ ಕಾಂಪ್ಲೆಕ್ಸ್, ಆಶೋಕನಗರ, 3ನೇ ಕ್ರಾಸ್, ಮೆಡ್ಲೇರಿ ರೋಡ್, ರಾಣಿಬೆನ್ನೂರು ತಾ: ಹಾವೇರಿ ಜಿಲ್ಲೆ, ದೂರವಾಣಿ ಸಂಖ್ಯೆ: 08373-261649, ಮೊಬೈಲ್ 9901804333 ಇ-ಮೇಲ್: nishard83@gmail.com
11	ಉತ್ತರ ಕನ್ನಡ	ಶ್ರೀ ಮಲ್ಲಿಕಾರ್ಜುನ ಜನ ಸೇವಾ ಸೊಸೈಟಿ, ಪ್ಲಾಟ್ ನಂ. 327, ಸೆಕ್ಟರ್ ನಂ.2, ಶಿವಬಸವ ನಗರ, ಬೆಳಗಾವಿ ಶಾಖೆ: ಅಸೋಕ ವಿ.ನೆತಲಕರ ಮನೆ ನಂ.1682, ಹಬ್ಬುವಾಡಾ, ಕಾರವಾರ, ದೂರವಾಣಿ ಸಂಖ್ಯೆ: 9663441475, ಇ-ಮೇಲ್: mallikarjunasevasociety@gmail.com

..2

12	ಬೆಂಗಳೂರು ನಗರ	ಶ್ರೀ ಮಹಾಲಕ್ಷ್ಮೀ ಎಜುಕೇಷನ್ ಟ್ರಸ್ಟ್ (ರಿ), ಹಗಲು ಯೋಗಕ್ಷೇಮ ಕೇಂದ್ರ, ನಂ.53/54, 8ನೇ ಎ ಮುಖ್ಯರಸ್ತೆ, 4ನೇ ಹಚಿತ, 4ನೇ ಬ್ಲಾಕ್, ಬಸವೇಶ್ವರ ನಗರ, ಪೊಲೀಸ್ ಸ್ಟೇಷನ್ ಹತ್ತಿರ, ಬೆಂಗಳೂರು 79, ದೂರವಾಣಿ ಸಂಖ್ಯೆ: 9740165969
13	ಚಿತ್ರದುರ್ಗ	ಸಿದ್ದೇಶ್ವರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ಬೆಸ್ಕಾಂ ಕಛೇರಿ ಎದುರು, ಚಳ್ಳಕೆರೆ ರಸ್ತೆ, ಹಿರಿಯೂರು 577599, ಚಿತ್ರದುರ್ಗ ಜಿಲ್ಲೆ, ದೂರವಾಣಿ ಸಂಖ್ಯೆ: 9900973339, ಇಮೇಲ್ ವಿಳಾಸ: siddeswara.208@gmail.com, tnnaidu011@gmail.com
14	ರಾಯಚೂರು	ಸುರಕ್ಷ (ರಿ), ನಂ.1–5–189, ಹಿಮಗಿರಿ ಕಾಂಪ್ಲೆಕ್ಸ್ ಹತ್ತಿರ, ಸ್ಟೇಷನ್ ಗುಡ್‌ಶೆಡ್ ರಸ್ತೆ, ರಾಯಚೂರು 584101, ದೂರವಾಣಿ ಸಂಖ್ಯೆ: 08532–228510, ಇಮೇಲ್: rjssraichur@gmail.com
15	ಗುಲ್ಬರ್ಗಾ	ಕಿತ್ತೂರ ರಾಣಿ ಚನ್ನಮ್ಮ ಮಹಿಳಾ ಮಂಡಳ, ಶಾಖೆ ಗುಲ್ಬರ್ಗಾ, ಮನೆ ನಂ. 169/11/ಬಿ ಹಳೇ ರಾಘವೇಂದ್ರ ಕಾಲೋನಿ, ಬ್ರಹ್ಮಪುರ, ಗುಲ್ಬರ್ಗಾ ದೂರವಾಣಿ ಸಂಖ್ಯೆ: 9886659849
16	ಶಿವಮೊಗ್ಗ	ಗುಡ್ ಲಕ್ ಆರೈಕೆ ಕೇಂದ್ರ, ಶಿವಪ್ಪ ನಾಯಕ ಬಡಾವಣೆ, ಕಾಶೀಪುರ ಮುಖ್ಯರಸ್ತೆ, ಆಲ್ಕೊಳ, ಶಿವಮೊಗ್ಗ ಜಿಲ್ಲೆ ಮೊಬೈಲ್ ಸಂಖ್ಯೆ: 9844588769
17	ಗದಗ	ಜೀವನ್ ಜ್ಯೋತಿ ಸೇವಾ ಸಂಸ್ಥೆ, (ರಿ), ಶಿವರತ್ನ ಕಾಂಪೌಂಡ್ ನರಸಾಪುರ ಶಾಖೆ, ನಂ.88/97–98 ಬೆಟಗೇರಿ, ಗದಗ ಜಿಲ್ಲೆ. 9141189206, 08372–246566 ಇ–ಮೇಲ್: mcpgadag@gmail.com
18	ಕೊಪ್ಪಳ	ಶ್ರೀ ಸಿದ್ದೇಶ್ವರ ವಿದ್ಯಾಪೀಠ (ರಿ), ತಾಳಿಕೋಟಿ, ವಿಜಯಪುರ ಜಿಲ್ಲೆ ರವರು ಶಾಖೆ: ಕೊಪ್ಪಳ ಬಿ.ಟಿ.ಪಾಟೀಲ ನಗರ, ಕೊಪ್ಪಳ ಜಿಲ್ಲೆ ದೂರವಾಣಿ ಸಂಖ್ಯೆ08352267042, ಮೊಬೈಲ್ ಸಂಖ್ಯೆ: 9741093523
19	ಬಾಗಲಕೋಟೆ	ಸೇವಾ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಸಂಸ್ಥೆ (ರಿ) ಎಸ್.ಹೆಚ್.ಗುಳಿದ ಮನೆ ಸಂತೃಪ್ತಿ ನಿಲಯ, ಸಕ್ರಿ ಲೇಔಟ್, ಕೆಂಪಾ ರೋಡ್, ಬಾಗಲಕೋಟೆ 587101 ದೂ: 9448210182, 08354–222122 ಇಮೇಲ್ svs_1995@yahoo.co.in
20	ಬೆಂಗಳೂರು ನಗರ	ಶ್ರೀ ಚಾಮುಂಡಿ ವಿವಿದೊದ್ದೇಶ ಸಾಮಾಜಿಕ ಕ್ಷೇಮಾಭಿವೃದ್ಧಿ ಸಂಘ, ನಂ.18, 2ನೇ ಮುಖ್ಯರಸ್ತೆ, ಜಿ.ಕೆ.ವಿ.ಕೆ ಅಂಚೆ, ಚಿಕ್ಕ ಬೊಮ್ಮಸಂದ್ರ, ಯಲಹಂಕ ಉಪನಗರ, ಬೆಂಗಳೂರು ಜಿಲ್ಲೆ. 9449768386, 080–28561570
21	ಚಾಮರಾಜನಗರ	ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ (ರಿ), ನಂ.22/67, ಮೈಲಾರ ಲಿಂಗೇಶ್ವರ ನಿಲಯ, 2ನೇ ಅಡ್ಡರಸ್ತೆ, ಭ್ರಮ್ಮರಂಭ ಬಡಾವಣೆ, ಚಾಮರಾಜನಗರ ಜಿಲ್ಲೆ. 9916876587, ಇ–ಮೇಲ್ ವಿಳಾಸ:sves2001@gmail.com
22	ಯಾದಗಿರಿ	ಶ್ರೀ ಸಾಯಿ ಗ್ರಾಮೀಣಭಿವೃದ್ಧಿ ಶಿಕ್ಷಣ ಸಂಸ್ಥೆ, ಮದನಮೋಹನ ಬಿಲ್ಡಿಂಗ್, ಯಾದಗಿರಿ ತಾ: ಯಾದಗಿರಿ ಜಿಲ್ಲೆ, 9379078790, 9663966520 ಇ–ಮೇಲ್ ವಿಳಾಸ: ssresy123@gmail.com
23	ಮಂಡ್ಯ	ಜ್ಞಾನಸಿಂಧು ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ (ರಿ), 5ನೇ ಕ್ರಾಸ್, ನೆಹರು ನಗರ, ಮಂಡ್ಯ ಜಿಲ್ಲೆ
24	ಮಡಿಕೇರಿ	ಶ್ರೀ ಮಹಾಲಿಂಗೇಶ್ವರ ವಿದ್ಯಾಸಂಸ್ಥೆ (ರಿ), ಸುಳುಗಳಲೆ, ಶನಿವಾರ ಸಂತೆ ಹೋಬಳಿ, ಸೋಮವಾರಪೇಟೆ ತಾಲ್ಲೂಕು, ಮಡಿಕೇರಿ, ಕೊಡಗು ಜಿಲ್ಲೆ.
25	ಬೆಂಗಳೂರು ಗ್ರಾಮಾಂತರ	ಗ್ರಾಮೀಣ ಅಭ್ಯದಯ ಸೇವಾ ಸಂಸ್ಥೆ (ರಿ), ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ